ದಿಃ 20.06.2022 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಖ್ಯ ವಿಚಾರಣೆಃ ಶ್ರೀ ಎಂ.ಎಂ.ಆರ್., ವಕೀಲರಿಂದ ವಾದಿ ಪರವಾಗಿ

1. ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿವೆ ಹಾಗೂ ಸತ್ಯವಾಗಿವೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.
2. ವಾದಿಯು ನನಗೆ ನೀಡಿದ ಅಧಿಕಾರ ಪತ್ರವನ್ನು ನೀಡಿದ್ದು ನಿ.ಪಿ.1 ಎಂದು ಗುರುತಿಸಲಾಯಿತು, ದಿಃ 06.11.1998 ನೇ ಇಸವಿಯ ವಿಭಾಗ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.2 ಎಂದು ಗುರುತಿಸಲಾಯಿತು, ನೂರ್ ಮಹಮದ್ ರವರು ಸಾಲ ಪಡೆಯಲು ನೀಡಿರುವ ಒಪ್ಪಿಗೆ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.3 ಎಂದು ಗುರುತಿಸಲಾಯಿತು, 1 ನೇ ಪ್ರತಿವಾದಿಯು ನೀಡಿರುವ ಸಹಿ ಮಾಡಿರುವ ಖಾಲಿ ಚೆಕ್ಕನ್ನು ಹಾಜರು ಮಾಡಿದ್ದು ನಿ.ಪಿ.4 ಎಂದು ಗುರುತಿಸಲಾಯಿತು, ದಿಃ 18.12.2008 ರಂದು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಚರ ಆಸ್ತಿಯ ಮಾರಾಟದ ಬಗ್ಗೆ ಬಹಿರಂಗ ಹರಾಜಿನ ಬಗ್ಗೆ ಪ್ರಕಟಣೆ ನೀಡಿರುವ ನೋಟೀಸನ್ನು ಹಾಜರು ಮಾಡಿದ್ದು ನಿ.ಪಿ.5 ಎಂದು ಗುರುತಿಸಲಾಯಿತು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ನೀಡಿದ ಸಾರ್ವಜನಿಕರ ಪ್ರಕರಣೆಯನ್ನು ಹಾಜರು ಮಾಡಿದ್ದು ನಿ.ಪಿ.6 ಎಂದು ಗುರುತಿಸಲಾಯಿತು, ದಿಃ 01.01.2009 ರಂದು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ನೀಡಿದ ರಸೀದಿಯನ್ನು ಹಾಜರು ಮಾಡಿದ್ದು ನಿ.ಪಿ.7 ಎಂದು ಗುರುತಿಸಲಾಯಿತು, ದಿಃ 01.01.2009 ರಂದು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ನೀಡಿದ ರಸೀದಿಯನ್ನು ಹಾಜರು ಮಾಡಿದ್ದು ನಿ.ಪಿ.8 ಎಂದು ಗುರುತಿಸಲಾಯಿತು, ದಿಃ 02.02.2009 ರಂದು

ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಸೈಯದ್ ಆರೀಫ್ ರವರಿಗೆ ನೀಡಿದ ರಸೀದಿ ನಿ.ಪಿ.9 ಎಂದು ಗುರುತಿಸಲಾಯಿತು, ದಿಃ 02.02.2009 ರಂದು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ನೀಡಿದ ರಸೀದಿ ನಿ.ಪಿ.10 ಎಂದು ಗುರುತಿಸಲಾಯಿತು, ಎ.ಎಂ ನೂರ್ ಮಹಮದ್ ರವರು ಎಸ್.ಕೆ. ಸೈಯದ್ ಆರೀಫ್ ರವರಿಗೆ ನೀಡಿದ ಅಧಿಕಾರ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.11 ಎಂದು ಗುರುತಿಸಲಾಯಿತು, ದಿಃ 04.02.1909 ನೇ ಇಸವಿಯ ನೊಂದಾಯಿತ ಕರಾರು ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.12 ಎಂದು ಗುರುತಿಸಲಾಯಿತು, ದಿಃ 25.06.2010 ರ ಕ್ರಯ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.13 ಎಂದು ಗುರುತಿಸಲಾಯಿತು, 2010-11 ರ ಸಾಲಿನ ತೆರಿಗೆ ಬೇಡಿಕೆ ರಸೀದಿಯನ್ನು ಹಾಜರು ಮಾಡಿದ್ದು ನಿ.ಪಿ.14 ಎಂದು ಗುರುತಿಸಲಾಯಿತು, ದಿಃ 20.04.2012 ರ ದಾನ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.15 ಎಂದು ಗುರುತಿಸಲಾಯಿತು, ದಿಃ 26.04.2012 ರ ವಿಭಾಗ ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.16 ಎಂದು ಗುರುತಿಸಲಾಯಿತು, ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ, 2012-13 ರ ತೆರಿಗೆ ಬೇಡಿಕೆ ರಸೀದಿಯ ದೃಡೀಕೃತ ನಕಲನ್ನು ಹಾಜರು ಮಾಡಿದ್ದು ನಿ.ಪಿ.17 ಎಂದು ಗುರುತಿಸಲಾಯಿತು. ದಿಃ 02.09.2012 ರ ಕರಾರು ಪತ್ರವನ್ನು ಹಾಜರು ಮಾಡಿದ್ದು ನಿ.ಪಿ.18 ಎಂದು ಗುರುತಿಸಲಾಯಿತು. ದಿಃ 05.02.2008 ರ ತೆರಿಗೆ ರಸೀದಿಯನ್ನು ಹಾಜರು ಮಾಡಿದ್ದು ನಿ.ಪಿ.19 ಎಂದು ಗುರುತಿಸಲಾಯಿತು, 2002-2003 ರ ಆಸ್ತಿ ತೆರಿಗೆಯ ಸ್ವಯಂ ಘೋಷಿತ ನಿರ್ಧರಣಾ ನಮೂನೆಯನ್ನು ಹಾಜರು

ಮಾಡಿದ್ದು ನಿ.ಪಿ.20 ಎಂದು ಗುರುತಿಸಲಾಯಿತು, ದಿಃ 05.02.2008 ರ ತೆರಿಗೆ ರಸೀದಿಯನ್ನು ಪಾವತಿ ಮಾಡಿದ್ದು ನಿ.ಪಿ.21 ಎಂದು ಗುರುತಿಸಲಾಯಿತು, ಮೂಡಿಗೆರೆ ಪಟ್ಟಣ ಪಂಚಾಯಿತಿಯಿಂದ ನೀಡಿದ 2003-2004 ರ ಆಸ್ತಿ ತೆರಿಗೆಯ ಸ್ವಯಂ ಘೋಷಿತ ನಿರ್ಧರಣಾ ನಮೂನೆಯನ್ನು ಹಾಜರು ಮಾಡಿದ್ದು ನಿ.ಪಿ.22 ಎಂದು ಗುರುತಿಸಲಾಯಿತು, ದಿಃ 05.02.2009 ರ ತೆರಿಗೆ ರಸೀದಿಯನ್ನು ಹಾಜರು ಮಾಡಿದ್ದು ನಿ.ಪಿ.23 ಎಂದು ಗುರುತಿಸಲಾಯಿತು, 2004-2005 ರ ಆಸ್ತಿ ತೆರಿಗೆಯ ಸ್ವಯಂ ಘೋಷಿತ ನಿರ್ಧರಣಾ ನಮೂನೆಯನ್ನು ಹಾಜರು ಮಾಡಿದ್ದು ನಿ.ಪಿ.24 ಎಂದು ಗುರುತಿಸಲಾಯಿತು, ದಿಃ 05.02.2009 ರ ತೆರಿಗೆ ರಸೀದಿಯನ್ನು ಹಾಜರು ಮಾಡಿದ್ದು ನಿ.ಪಿ.25 ಎಂದು ಗುರುತಿಸಲಾಯಿತು, 2006-2007 ರ ಆಸ್ತಿ ತೆರಿಗೆಯ ಸ್ವಯಂ ಘೋಷಿತ ನಿರ್ಧರಣಾ ನಮೂನೆಯನ್ನು ಹಾಜರು ಮಾಡಿದ್ದು ನಿ.ಪಿ.26 ಎಂದು ಗುರುತಿಸಲಾಯಿತು, ದಿಃ 05.02.2009 ರ ತೆರಿಗೆ ರಸೀದಿಯನ್ನು ಹಾಜರು ಮಾಡಿದ್ದು ನಿ.ಪಿ.27 ಎಂದು ಗುರುತಿಸಲಾಯಿತು, 2007-2008 ರ ಆಸ್ತಿ ತೆರಿಗೆಯ ಸ್ವಯಂ ಘೋಷಿತ ನಿರ್ಧರಣಾ ನಮೂನೆಯನ್ನು ಹಾಜರು ಮಾಡಿದ್ದು ನಿ.ಪಿ.28 ಎಂದು ಗುರುತಿಸಲಾಯಿತು, ದಿಃ 05.02.2009 ರ ತೆರಿಗೆ ರಸೀದಿಯನ್ನು ಹಾಜರು ಮಾಡಿದ್ದು ನಿ.ಪಿ.29 ಎಂದು ಗುರುತಿಸಲಾಯಿತು, 2008-2009 ರ ಆಸ್ತಿ ತೆರಿಗೆಯ ಸ್ವಯಂ ಘೋಷಿತ ನಿರ್ಧರಣಾ ನಮೂನೆಯನ್ನು ಹಾಜರು ಮಾಡಿದ್ದು ನಿ.ಪಿ.30 ಎಂದು ಗುರುತಿಸಲಾಯಿತು, ದಿಃ 24.06.2010 ರ ತೆರಿಗೆ ರಸೀದಿಯನ್ನು

ಹಾಜರು ಮಾಡಿದ್ದು ನಿ.ಪಿ.31 ಎಂದು ಗುರುತಿಸಲಾಯಿತು, 2009-2010 ರ ಆಸ್ತಿ ತೆರಿಗೆಯ ಸ್ವಯಂ ಘೋಷಿತ ನಿರ್ಧರಣಾ ನಮೂನೆಯನ್ನು ಹಾಜರು ಮಾಡಿದ್ದು ನಿ.ಪಿ.32 ಎಂದು ಗುರುತಿಸಲಾಯಿತು, ದಿಃ 24.06.2010 ರ ತೆರಿಗೆ ರಸೀದಿಯನ್ನು ಹಾಜರು ಮಾಡಿದ್ದು ನಿ.ಪಿ.33 ಎಂದು ಗುರುತಿಸಲಾಯಿತು, 2010-2011 ರ ಆಸ್ತಿ ತೆರಿಗೆಯ ಸ್ವಯಂ ಘೋಷಿತ ನಿರ್ಧರಣಾ ನಮೂನೆಯನ್ನು ಹಾಜರು ಮಾಡಿದ್ದು ನಿ.ಪಿ.34 ಎಂದು ಗುರುತಿಸಲಾಯಿತು, ದಿಃ 07.04.2012 ರ ತೆರಿಗೆ ರಸೀದಿಯನ್ನು ಹಾಜರು ಮಾಡಿದ್ದು ನಿ.ಪಿ.35 ಎಂದು ಗುರುತಿಸಲಾಯಿತು, 2011-2012 ರ ಆಸ್ತಿ ತೆರಿಗೆಯ ಸ್ವಯಂ ಘೋಷಿತ ನಿರ್ಧರಣಾ ನಮೂನೆಯನ್ನು ಹಾಜರು ಮಾಡಿದ್ದು ನಿ.ಪಿ.36 ಎಂದು ಗುರುತಿಸಲಾಯಿತು, ತೆರಿಗೆ ರಸೀದಿಯನ್ನು ಹಾಜರು ಮಾಡಿದ್ದು ನಿ.ಪಿ.37 ಎಂದು ಗುರುತಿಸಲಾಯಿತು, 2017-2018 ರ ಆಸ್ತಿ ತೆರಿಗೆಯ ಸ್ವಯಂ ಘೋಷಿತ ನಿರ್ಧರಣಾ ನಮೂನೆಯನ್ನು ಹಾಜರು ಮಾಡಿದ್ದು ನಿ.ಪಿ.38 ಎಂದು ಗುರುತಿಸಲಾಯಿತು, ತೆರಿಗೆ ರಸೀದಿಯನ್ನು ಹಾಜರು ಮಾಡಿದ್ದು ನಿ.ಪಿ.39 ಎಂದು ಗುರುತಿಸಲಾಯಿತು, 2018-2019 ರ ಆಸ್ತಿ ತೆರಿಗೆಯ ಸ್ವಯಂ ಘೋಷಿತ ನಿರ್ಧರಣಾ ನಮೂನೆಯನ್ನು ಹಾಜರು ಮಾಡಿದ್ದು ನಿ.ಪಿ.40 ಎಂದು ಗುರುತಿಸಲಾಯಿತು, ತೆರಿಗೆ ರಸೀದಿಯನ್ನು ಹಾಜರು ಮಾಡಿದ್ದು ನಿ.ಪಿ.41 ಎಂದು ಗುರುತಿಸಲಾಯಿತು, 2019-2020 ರ ಆಸ್ತಿ ತೆರಿಗೆಯ ಸ್ವಯಂ ಘೋಷಿತ ನಿರ್ಧರಣಾ ನಮೂನೆಯನ್ನು ಹಾಜರು ಮಾಡಿದ್ದು ನಿ.ಪಿ.42 ಎಂದು ಗುರುತಿಸಲಾಯಿತು, ದಿಃ

24.09.2018 ರಂದು ಪ್ರತಿವಾದಿಗಳಿಗೆ ನೀಡಿದ ನೋಟೀಸನ್ನು ಹಾಜರು ಮಾಡಿದ್ದು ನಿ.ಪಿ.43 ಎಂದು ಗುರುತಿಸಲಾಯಿತು, 1 ನೇ ಎದುರುದಾರರಿಗೆ ನೀಡಿದ ನೋಟೀಸನ್ನು 1 ನೇ ಎದುರುದಾರರು ತಿರಸ್ಕರಿಸಿದ ಕಾರಣ ವಾಪಸ್ಸು ಬಂದಿದ್ದು ಸದರಿ ಅಂಚೆ ಲಕೋಟೆಯನ್ನು O.S.5/2019 ರಲ್ಲಿ ನ್ಯಾಯಾಲಯದಲ್ಲಿ ತೆರೆದು ಗುರುತಿಸಿದ್ದು ಸದರಿ ಅಂಚೆ ಲಕೋಟೆಯನ್ನು ನಿ.ಪಿ.44 ಎಂದು ಗುರುತಿಸಲಾಯಿತು, 2 ನೇ ಎದುರುದಾರರಿಗೆ ನೀಡಿದ ನೋಟೀಸನ್ನು 2 ನೇ ಎದುರುದಾರರು ತಿರಸ್ಕರಿಸಿದ ಕಾರಣ ವಾಪಸ್ಸು ಬಂದಿದ್ದು ಸದರಿ ಅಂಚೆ ಲಕೋಟೆಯನ್ನು O.S.5/2019 ರಲ್ಲಿ ನ್ಯಾಯಾಲಯದಲ್ಲಿ ತೆರೆದು ಗುರುತಿಸಿದ್ದು ಸದರಿ ಅಂಚೆ ಲಕೋಟೆಯನ್ನು ನಿ.ಪಿ.45 ಎಂದು ಗುರುತಿಸಲಾಯಿತು, 3 ನೇ ಎದುರುದಾರರಿಗೆ ನೀಡಿದ ನೋಟೀಸನ್ನು 3 ನೇ ಎದುರುದಾರರು ತಿರಸ್ಕರಿಸಿದ ಕಾರಣ ವಾಪಸ್ಸು ಬಂದಿದ್ದು ಸದರಿ ಅಂಚೆ ಲಕೋಟೆಯನ್ನು O.S.5/2019 ರಲ್ಲಿ ನ್ಯಾಯಾಲಯದಲ್ಲಿ ತೆರೆದು ಗುರುತಿಸಿದ್ದು ಸದರಿ ಅಂಚೆ ಲಕೋಟೆಯನ್ನು ನಿ.ಪಿ.46 ಎಂದು ಗುರುತಿಸಲಾಯಿತು, ಸದರಿ ಅಂಚೆ ಲಕೋಟೆಗಳಲ್ಲಿ ಇದ್ದ ನೋಟೀಸಿನ ಪ್ರತಿಗಳನ್ನು ನಿ.ಪಿ.47 ರಿಂದ 49 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಶ್ರೀ ಎಸ್.ಡಿ. ವಕೀಲರಿಂದ ಪ್ರತಿವಾದಿಗಳ ಪರವಾಗಿ**

3. ಪಾಟೀ ಸವಾಲು ಮಾಡಲು ಕಾಲವಕಾಶ ಕೋರಿದ್ದು, ಕಾಲವಕಾಶ ನೀಡಲಾಯಿತು.

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

**ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,**
**ಮೂಡಿಗೆರೆ.**

ದಿಃ 27.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಪಾಟೀ ಸವಾಲು ಶ್ರೀ ಎಸ್.ಡಿ ವಕೀಲರಿಂದ ಪ್ರತಿವಾದಿಯರ ಪರವಾಗಿ

4. ಎಸ್.ಕೆ ರಫೀಕ್ ರವರು ನನಗೆ 30 ವರ್ಷಗಳಿಂದ ಪರಿಚಯ. ಎಸ್.ಕೆ ರಫೀಕ್ ಮತ್ತು ನಾನು ಒಟ್ಟಿಗೆ ಎಂದಿಗೂ ವ್ಯಾಪಾರ ಮಾಡಿಲ್ಲ. ಎಸ್.ಕೆ ರಫೀಕ್ ಮತ್ತು ನಾನು ಒಂದೇ ಊರಿನವರು ಆಗಿರುವುದರಿಂದ ನನಗೆ ಪರಿಚಯ. ಎಸ್.ಕೆ ರಫೀಕ್ ರವರು ದಾವಣಗೆರೆಯ ಎಂ.ಸಿ. ಕಾಲೋನಿಯಲ್ಲಿ ವಾಸವಾಗಿದ್ದರು. ನಾನು ದಾವಣಗೆರೆಯ ವಿನೋಭಾಗ ನಗರದಲ್ಲಿ ವಾಸವಿದ್ದೆ. ಈಗ್ಗೆ 2 ವರ್ಷಗಳಿಂದ ಬೇರೆ ಕಾಲೋನಿಯಲ್ಲಿ ವಾಸವಿದ್ದೇನೆ. ಎಸ್.ಕೆ ರಫೀಕ್ ರವರು ಈಗಲು ಅದೇ ಕಾಲೋನಿಯಲ್ಲಿ ವಾಸವಿದ್ದಾರೆ. ನಾನು ಹಾಜರು ಪಡಿಸಿರುವ ಜಿ.ಪಿ.ಎ ಅನ್ನು ಓದಿ ನೋಡಿದ್ದೇನೆ. ನಿ.ಪಿ.1 ಜಿ.ಪಿ.ಎ ದಲ್ಲಿ ವಾದಿ ಎಂ.ಸಿ ಕಾಲೋನಿಯಲ್ಲಿ ವಾಸವಿದ್ದಾರೆ ಎಂದು ಹೇಳಲಾಗಿದೆ. ವಾದ ಪತ್ರದಲ್ಲಿಯು ವಾದಿ ದಾವಣಗೆರೆಯ ಎಂ.ಸಿ ಕಾಲೋಯಲ್ಲಿ ವಾಸವಿದ್ದಾರೆ ಎಂದು ಹೇಳಿದ್ದೇನೆ. ವಾದ ಪತ್ರವನ್ನು ನಾನು ಓದಿ ನೋಡಿ ಸಹಿ ಮಾಡಿದ್ದೇನೆ. ನಾನು ಹಾಜರು ಪಡಿಸಿರುವ ದಾಖಲೆಗಳನ್ನು ಓದಿ ತಿಳಿದುಕೊಂಡಿದ್ದೇನೆ.

5. ನೂರ್ ಅಹಮದ್ ರವರು ಎಸ್.ಕೆ. ಸೈಯದ್ ಆರೀಫ್ ರವರಿಗೆ ಬರೆದುಕೊಟ್ಟ ನಿ.ಪಿ.11 ಜಿ.ಪಿ.ಎ ತಯಾರಿಸಲು ಪತ್ರವನ್ನು ಮೂಡಿಗೆರೆಯಲ್ಲಿ ಖರೀದಿಸಿದ್ದರು. ಮೂಡಿಗೆರೆಯಲ್ಲಿ ಎಲ್ಲಿ ಆ ಪತ್ರವನ್ನು ಖರೀದಿಸಿದ್ದರು ಎಂದು ನನಗೆ ನೆನಪಿಲ್ಲ. 2009 ರಲ್ಲಿ ಸ್ಟಾಂಪ್ ಪೇಪರ್ ಗಳನ್ನು ಎಲ್ಲಿ ಖರೀದಿ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನಿ.ಪಿ.11 ರ ಪತ್ರವನ್ನು ಯಾವ ದಿನಾಂಕದಂದು ಮೂಡಿಗೆರೆಯಲ್ಲಿ ಖರೀದಿಸಿದ್ದರು ಎಂದು ನನಗೆ ನೆನಪಿಲ್ಲ. ನಿ.ಪಿ.11

ಅನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ನಿ.ಪಿ.11 ಎಷ್ಟು ಪುಟಗಳಿಂದ ಕೂಡಿದೆ ಎಂದು ನನಗೆ ಗೊತ್ತಿಲ್ಲ. 1998 ರಲ್ಲಿ ನಿ.ಪಿ.11 ಜಿ.ಪಿ.ಎ ತಯಾರಿಸಲು ಪತ್ರವನ್ನು ಖರೀದಿಸಿದ್ದರು. ಆ ಪತ್ರವನ್ನು ಖರೀದಿಸುವಾಗ ನಾನು ನೂರ್ ಅಹಮದ್ ರವರ ಜೊತೆ ಬಂದಿಲ್ಲ. 1998 ರಲ್ಲಿ ಖರೀದಿಸಿದ್ದ ಪತ್ರವೇ ನಿ.ಪಿ.11 ಜಿ.ಪಿ.ಎ ಆಗಿರುತ್ತದೆ ಎಂದರೆ ಸರಿ. ನಿ.ಪಿ.11 ರಲ್ಲಿ ಬರೆದಿರುವ ಬರವಣಿಗೆಗಳನ್ನು ನಾನು ನೋಡಿದ್ದೇನೆ. ನಿ.ಪಿ.11 ಜಿ.ಪಿ.ಎ ದಲ್ಲಿ ನೂರ್ ಅಹಮದ್ ರವರು ಎಸ್.ಕೆ. ಸೈಯದ್ ಆರೀಫ್ ರವರಿಗೆ ಜಿ.ಪಿ.ಎ ದಲ್ಲಿ ಕಾಣಿಸಿರುವ ಸ್ವತ್ತನ್ನು ಮಾರಾಟ ಮಾಡುವ ಅಧಿಕಾರವನ್ನು ನೀಡಿದ್ದಾರೋ ಇಲ್ಲವೋ ಎಂದು ನನಗೆ ನೆನಪಿಲ್ಲ. ನಿ.ಪಿ.11 ಜಿ.ಪಿ.ಎ ತಯಾರಿಸಲು ಪತ್ರವನ್ನು ಎಷ್ಟು ಮೌಲ್ಯದ ಪತ್ರವನ್ನು ಖರೀದಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ.

6. 1998 ರಲ್ಲಿ ಎಸ್.ಕೆ. ಸೈಯದ್ ಆರೀಫ್ ರವರು ದಾವಣಗೆರೆಯ ವಿನೋಭಾನಗರದಲ್ಲಿ ವಾಸವಿದ್ದರು. ವಾದಿ ಮತ್ತು ಎಸ್.ಕೆ. ಸೈಯದ್ ಆರೀಫ್ ರವರು 1998 ರಲ್ಲಿ ಬೇರೆ ಬೇರೆ ವಾಸವಿದ್ದರು. 1998 ರಲ್ಲಿ ನಾನು ಖಾಸಗಿಯಾಗಿ ಎಲೆಕ್ಟ್ರಿಕ್ ಕೆಲಸ ಮಾಡುತ್ತಿದ್ದೆ. 1998 ರಲ್ಲಿ ನಿ.ಪಿ.11 ತಯಾರಿಸಲು ಪತ್ರವನ್ನು ನೂರ್ ಅಹಮದ್ ರವರು ಖರೀದಿಸಿದ್ದರು. 1998 ರಲ್ಲಿ ಮೂಡಿಗೆರೆಗೆ ನಾನು ನೂರ್ ಅಹಮದ್ ಜೊತೆ ಬಂದಿಲ್ಲ. ನಿ.ಪಿ.11 ಅನ್ನು ಮೂಡಿಗೆರೆಯಲ್ಲಿ ಎಲ್ಲಿ ಟೈಪ್ ಮಾಡಿಸಿದ್ದರು ಎಂದು ನನಗೆ ಗೊತ್ತಿಲ್ಲ. ಈ ಕೇಸನ್ನು ದಾಖಲಿಸಿಸುವ ಮೊದಲು ವಾದಿಯನ್ನು ನಿ.ಪಿ.11 ಅನ್ನು ಮೂಡಿಗೆರೆಯಲ್ಲಿ ಎಲ್ಲಿ ಟೈಪ್ ಮಾಡಿಸಿದ್ದರು ಮತ್ತು ಯಾರು ಯಾರು ಟೈಪ್ ಮಾಡಿಸುವಾಗ ಇದ್ದರು ಎಂದು ನಾನು ವಿಚಾರಿಸಿಲ್ಲ. ಎಸ್.ಕೆ. ಸೈಯದ್ ಆರೀಫ್ ರವರಿಗೆ 1998 ರಲ್ಲಿ ಎಷ್ಟು ಪ್ರಾಯ ಆಗಿತ್ತು ಎಂದು ನನಗೆ ನೆನಪಿಲ್ಲ. ಎಸ್.ಕೆ. ಸೈಯದ್ ಆರೀಫ್ ರವರು ಈಗ ಬದುಕಿದ್ದಾರೆ. ಎಸ್.ಕೆ. ಸೈಯದ್ ಆರೀಫ್ ರವರು ವಾದಿಗೆ ತಮ್ಮನಾಗಬೇಕು. 1998 ರಲ್ಲಿ ವಾದಿಯವರು ಎಸ್.ಕೆ. ಸೈಯದ್

ಆರೀಫ್ ರವರ ಜೊತೆ ಮೂಡಿಗೆರೆಗೆ ಹೋಗಿದ್ದರೋ ಇಲ್ಲವೋ ಎಂದು ನಾನು ವಿಚಾರಿಸಿಲ್ಲ. 1998 ರಲ್ಲಿ ಎಸ್.ಕೆ. ಸೈಯದ್ ಆರೀಫ್ ರವರು ಮೂಡಿಗೆರೆ ಹೋಗಿ ನಿ.ಪಿ.11 ರಂತೆ ಜಿ.ಪಿ.ಎ ಬರೆದುಕೊಟ್ಟಿದ್ದರು ಎಂದು ವಾದಿ ನನಗೆ ತಿಳಿಸಿದ್ದರು. ನಾನು ಎಸ್.ಎಸ್.ಎಲ್.ಸಿ ರವರೆಗೆ ಕಲಿತಿದ್ದೇನೆ. ನಾನು 30 ವರ್ಷಗಳಿಂದ Electrician ಆಗಿದ್ದೇನೆ. ನನಗೆ ವಾರ್ಷಿಕ ಆದಾಯ ಬರುತ್ತದೆ ಎಂದು ನಾನು ನೋಡಿಕೊಂಡಿಲ್ಲ. ನನಗೆ ಸರ್ಕಾರಿ ಪತ್ರಗಳು ಮತ್ತು ಇತರೆ ಪತ್ರಗಳು ಯಾವ ರೀತಿ ಆಗುತ್ತವೆ ಎಂಬ ಬಗ್ಗೆ ಸ್ವಲ್ಪ ಮಾಹಿತಿ ಇರುತ್ತದೆ.

7. ನಿ.ಪಿ.11 ಅನ್ನು ಮೂಡಿಗೆರೆಯಲ್ಲಿ ನೋಟರಿ ಮಾಡಿಸಿರುತ್ತಾರೆ. ನೋಟರಿಯನ್ನು ಯಾವ ವಕೀಲರು ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿ.ಪಿ.11 ಅನ್ನು ನೋಟರಿ ಮಾಡಿಸುವಾಗ ಯಾರೆಲ್ಲ ವಕೀಲರ ಬಳಿ ಹೋಗಿದ್ದರು ಎಂದು ವಾದಿಯ ಬಳಿ ವಿಚಾರಿಸಿಲ್ಲ. ಸಾಕ್ಷಿ ಹೇಳುವ ಪೂರ್ವದಲ್ಲಿ ನಾನು ವಾದಿಯನ್ನು ಆ ಬಗ್ಗೆ ವಿಚಾರಿಸಿಲ್ಲ. ನಿ.ಪಿ.11 ರಲ್ಲಿ ಒಟ್ಟು ಎಷ್ಟು ಸಹಿಗಳು ಇವೆ ಎಂದು ನನಗೆ ಗೊತ್ತಿಲ್ಲ.

8. 2009 ರಲ್ಲಿ ವಾದಿಯ ಜೊತೆ ನಾನು ಮೂಡಿಗೆರೆಗೆ ಬಂದಿಲ್ಲ. 2009 ರಲ್ಲಿ ಒಂದು ಪತ್ರ ಆಗಿರುತ್ತದೆ. 2009 ರಲ್ಲಿ ಯಾವ ಪತ್ರ ಆಗಿತ್ತು ಎಂದು ನನಗೆ ನೆನಪಿಲ್ಲ. 2009 ರಲ್ಲಿ ಒಟ್ಟು ಎಷ್ಟು ಪತ್ರಗಳು ಆಗಿವೆ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಮರೆಯುವ ಕಾಯಿಲೆ ಇದೆ ಎಂದು ನುಡಿಯುತ್ತಾರೆ. ನನಗೆ ಮರೆಯುವ ಕಾಯಿಲೆ 10 ವರ್ಷಗಳಿಂದ ಇದೆ. ನಾನು ಆ ಬಗ್ಗೆ ಔಷಧಿಯನ್ನು ಹಿಂದೆ ಪಡೆದಿದ್ದೇನೆ. ನಾನು ವಿಶ್ವನಾಥ ಎಂಬ ವೈದ್ಯರ ಬಳಿ ಔಷಧಿಯನ್ನು ಪಡೆದಿದ್ದೆ. ಆ ವೈದ್ಯರು physician ಆಗಿದ್ದರು. ನಾನು ಅವರ ಬಳಿ 10 ಬಾರಿ ಚಿಕಿತ್ಸೆಗೆ ಹೋಗಿದ್ದೆ. ಆ ಬಗ್ಗೆ ನಾನು ರಸೀದಿಯನ್ನು ಹೊಂದಿಲ್ಲ. ವೈದ್ಯರ ಬಳಿ ಚಿಕಿತ್ಸೆಗೆ ಹೋದರೆ ವೈದ್ಯರು ಸಲಹಾ ಚೀಟಿಯನ್ನು ನೀಡುತ್ತಾರೆ ಎಂದರೆ ಸರಿ. ನನಗೆ ಯಾವುದೇ ಮರೆಯುವ ಕಾಯಿಲೆ ಇಲ್ಲದೇ ಇದ್ದರು ದಾಖಲೆಗಳನ್ನು

ಸೃಷ್ಟಿ ಮಾಡಿ ಈ ದಾವೆಯನ್ನು ಸಲ್ಲಿಸಿರುವುದರಿಂದ ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

9. ವಾದಿ ನನಗೆ ಈ ಕೇಸಿನಲ್ಲಿ ಸಾಕ್ಷಿ ಹೇಳಲು ಜಿ.ಪಿ.ಎ ಅನ್ನು 2008 ರಲ್ಲಿ ನೀಡಿದ್ದರು. ವಾದಿ ನನಗೆ ಬರೆದುಕೊಟ್ಟ ಜಿ.ಪಿ.ಎ ಪತ್ರವನ್ನು ತರಲು ನಾನು ಮತ್ತು ವಾದಿ ಇಬ್ಬರು ಹೋಗಿದ್ದೆವು. ಜಿ.ಪಿ.ಎ ಅನ್ನು ಚಿಕ್ಕಮಗಳೂರಿನಲ್ಲಿ ಟೈಪ್ ಮಾಡಿಸಿದ್ದೆವು. 2008 ರಲ್ಲಿ ಜಿ.ಪಿ.ಎ ಬರೆಯಲು ಪತ್ರವನ್ನು ದಾವಣಗೆರೆಯಲ್ಲಿ ಪಡೆಯಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ವಾದಿ ಚಿಕ್ಕಮಗಳೂರಿನಲ್ಲಿ ಪತ್ರವನ್ನು ಖರೀದಿಸೋಣ ಎಂದು ಹೇಳಿದ್ದರಿಂದ ನಾನು ಚಿಕ್ಕಮಗಳೂರಿಗೆ ಬಂದಿದ್ದೆ ಎಂದು ನುಡಿಯುತ್ತಾರೆ. ವಾದಿ ನನಗೆ ಒಂದು ವಾರ ಮೊದಲು ಜಿ.ಪಿ.ಎ ಬರೆದುಕೊಡುತ್ತೇನೆ ಎಂದು ತಿಳಿಸಿದ್ದರು. ವಾದಿ ನನಗೆ ಬರೆದುಕೊಟ್ಟ ಜಿ.ಪಿ.ಎ ಅನ್ನು ಚಿಕ್ಕಮಗಳೂರಿನ ವಕೀಲರಾದ ಮಹೇಶ್ ಕುಮಾರ್ ರವರ ಬಳಿ ನೋಟರಿ ಮಾಡಿಸಿದ್ದೆವು. ಸದರಿ ಜಿ.ಪಿ.ಎ ಗೆ ವಾದಿ, ನಾನು ಮತ್ತು ವಕೀಲರಾದ ಮಹೇಶ್ ಕುಮಾರ್ ರವರು ಸಹಿ ಮಾಡಿದ್ದೆವು. ಆ ಜಿ.ಪಿ.ಎ ಮಾಡುವಾಗ ನಮ್ಮ ಜೊತೆ ಬೇರೆ ಯಾರು ಇದ್ದರು ಎಂದು ನನಗೆ ಗೊತ್ತಿಲ್ಲ. 2008 ರಲ್ಲಿ ವಾದಿ ನನಗೆ ಬರೆದುಕೊಟ್ಟ ಜಿ.ಪಿ.ಎ ಮೂಡಿಗೆರೆಯ ಕೆ.ಎಂ ರಸ್ತೆಯ ಆಸ್ತಿಗೆ ಸಂಬಂಧಿಸಿದಂತೆ ಬರೆದುಕೊಟ್ಟಿದ್ದರು. ಸದರಿ ಜಿಪಿಎ ಅನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಸಾಕ್ಷಿ ಹೇಳುವ ಮೊದಲು ಸದರಿ ಜಿ.ಪಿ.ಎ ಅನ್ನು ನಾನು ಓದಿ ನೋಡಿದ್ದೇನೆ.

10. ನಿ.ಪಿ.1 ಅನ್ನು 2008 ರಲ್ಲಿ ಮಾಡಿಕೊಟ್ಟಿದ್ದಾರೆ. 2008 ರಲ್ಲಿ ದಾವ ಸ್ವತ್ತು ನೂರ್ ಮೊಹಮದ್ ರವರ ಹೆಸರಿನಲ್ಲಿ ಇತ್ತು. ನಿ.ಪಿ.1 ರಲ್ಲಿ ಮೂಡಿಗೆರೆಯ ಕೆ.ಎಂ. ರಸ್ತೆಯ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ವಿವರ ಕಂಡು ಬರುವುದಿಲ್ಲ ಎಂದರೆ ಸಾಕ್ಷಿ ನಿ.ಪಿ.1 ಅನ್ನು ನೋಡಿ ಆ ಸಮಯದಲ್ಲಿ ಮೊಹಮದ್ ಅಲಿ ರೋಡ್ ಎಂದು ಕರೆಯಲಾಗುತ್ತಿತ್ತು

ಎಂದು ನುಡಿಯುತ್ತಾರೆ. ಮೊಹಮದ್ ಅಲಿ ರೋಡ್ ಈಗ ಕೆ.ಎಂ. ರಸ್ತೆ ಆಗಿರುತ್ತದೆ. ಮೊಹಮದ್ ಅಲಿ ರೋಡ್, ಕೆ.ಎಂ ರಸ್ತೆ ಯಾವಾಗ ಆಯಿತು ಎಂದು ನಾನು ತಿಳಿದುಕೊಂಡಿಲ್ಲ. 2018 ರಲ್ಲಿ ನಾನು ಮೂಡಿಗೆರೆಗೆ ಬಂದಿದ್ದೇನೆ. 2018 ರಲ್ಲಿ ನನ್ನ ಮತ್ತು ನೂರ್ ಅಹಮದ್ ರವರ ನಡುವೆ ಯಾವುದೇ ಪತ್ರ ಆಗಲಿಲ್ಲ. 2008 ರಲ್ಲಿ ವಾದಿ ನನಗೆ ಜಿ.ಪಿ.ಎ ಬರೆದುಕೊಟ್ಟಾಗ ನೂರ್ ಅಹಮದ್ ನಮ್ಮ ಜೊತೆ ಇರಲಿಲ್ಲ. 2008 ರಲ್ಲಿ ದಾವ ಸ್ವತ್ತು ನೂರ್ ಅಹಮದ್ ರವರ ಹೆಸರಿನಲ್ಲಿ ಇತ್ತು. 2008 ರಲ್ಲಿ ನಾವು ನೂರ್ ಅಹಮದ್ ರವರನ್ನು ದಾವ ಸ್ವತ್ತಿನ ಬಗ್ಗೆ ವಿಚಾರಿಸಲಿಲ್ಲ. ನನಗೆ ವಾದಿ ಬರೆದುಕೊಟ್ಟ ಜಿ.ಪಿ.ಎ ಎಷ್ಟು ಪುಟ ಇದೆ ಎಂದು ನನಗೆ ನೆನಪಿಲ್ಲ. ನಾನು 2008 ರಲ್ಲಿ ಆದ ಜಿ.ಪಿ.ಎ ದ ಒಂದು ಪುಟಕ್ಕೆ ಸಹಿ ಮಾಡಿದ್ದೇನೆ. ನನ್ನ ವಾದ ಪತ್ರದಲ್ಲಿ ಮತ್ತು ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ವಾದಿ ನನಗೆ 2008 ರಲ್ಲಿ ಬರೆದುಕೊಟ್ಟ ಜಿ.ಪಿ.ಎ ಆಧಾರದ ಮೇಲೆ ಈ ಪ್ರಕರಣವನ್ನು ದಾಖಲಿಸಿದ್ದೇನೆ ಎಂದು ಹೇಳಿದ್ದೇನೆ. ವಾದಿಯನ್ನು ನಾನು ನೆನ್ನೇ ಅಥವಾ ಇವತ್ತು ಭೇಟಿ ಆಗಿಲ್ಲ, ಕಾರಣ ಅವರು ಹೊರ ದೇಶದಲ್ಲಿ ಇದ್ದಾರೆ. ವಾದಿ ಕಳೆದ ತಿಂಗಳು ಹೊರ ದೇಶಕ್ಕೆ ಹೋಗಿದ್ದರು. ಈ ಕೇಸಿನಲ್ಲಿ ಸಾಕ್ಷಿ ನುಡಿಯಲು ನನಗೆ ಯಾವುದೇ ಜಿ.ಪಿ.ಎ ಇಲ್ಲ ಎಂದರೆ ಸರಿಯಲ್ಲ.

11. ನಿ.ಪಿ.11 ಜಿ.ಪಿ.ಎ ಗೆ ಸರಿಯಾದ ಮುದ್ರಾಂಕ ಶುಲ್ಕವನ್ನು ನಾವು ಪಾವತಿಸಿಲ್ಲ ಎಂದರೆ ಸುಳ್ಳು. ಸರಿಯಾದ ಮುದ್ರಾಂಕ ಶುಲ್ಕವನ್ನು ಪಾವತಿಸದೇ ನಿ.ಪಿ.11 ಅನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ನೂರ್ ಅಹಮದ್ ಮತ್ತು ಎಸ್.ಕೆ. ಸೈಯದ್ ಆರೀಫ್ ರವರು ಸಹೋದರರು ಆಗಿರುತ್ತಾರೆ. ನೂರ್ ಅಹಮದ್ ಮತ್ತು ಎಸ್.ಕೆ. ಸೈಯದ್ ಆರೀಫ್ ರವರು ಸಹೋದರರು ಎಂಬ ವಿಚಾರ ನನಗೆ 30 ವರ್ಷಗಳಿಂದ ಗೊತ್ತು. ನಾನು 30 ವರ್ಷದ ಹಿಂದೆ ಮೂಡಿಗೆರೆ ಬರುತ್ತಿರಲಿಲ್ಲ. ನೂರ್ ಅಹಮದ್ ವಾದಿಯ ಮನೆಗೆ ದಾವಣಗೆರೆಗೆ 30

ವರ್ಷಗಳ ಹಿಂದೆ ಬಂದಿದ್ದನ್ನು ನಾನು ನೋಡಿಲ್ಲ.

12. 1 ನೇ ಪ್ರತಿವಾದಿಯ ಮೂಲ ಊರು ಯಾವುದು ಎಂದು ನನಗೆ ಗೊತ್ತಿಲ್ಲ. ನಿ.ಪಿ.11 ಜಿ.ಪಿ.ಎ ದಲ್ಲಿ ನಮೂದಿಸಿರುವ ಸ್ವತ್ತು ವಾದ ಪತ್ರದ ಶೆಡ್ಯೂಲ್ ನಲ್ಲಿ ಕಂಡು ಬರುವುದಿಲ್ಲ ಎಂದರೆ ಸರಿಯಲ್ಲ. ನಿ.ಪಿ.11 ರಲ್ಲಿ ಕೆ.ಎಂ. ರಸ್ತೆ ಎಂದು ನಮೂದು ಇಲ್ಲ ಎಂದರೆ ಸರಿಯಲ್ಲ. ದಾವ ಸ್ವತ್ತಿನ ಪಶ್ಚಿಮ ದಿಕ್ಕಿಗೆ ಪಟ್ಟಣ ಪಂಚಾಯಿತಿಗೆ ಹೋಗುವ ರಸ್ತೆ ಇರುತ್ತದೆ. ದಾವ ಸ್ವತ್ತಿನ ಎದುರುಗಡೆ ಕೆ.ಎಂ. ರಸ್ತೆ ಬರುತ್ತದೆ. ಕೆ.ಎಂ. ರಸ್ತೆಯ ಪಕ್ಕದಲ್ಲಿ ಪಟ್ಟಣ ಪಂಚಾಯಿತಿಯ ರಸ್ತೆ ಬರುವುದಿಲ್ಲ. ಪಟ್ಟಣ ಪಂಚಾಯಿತಿಯ ರಸ್ತೆ ದಾವ ಸ್ವತ್ತಿನ ಯಾವ ದಿಕ್ಕಿಗೆ ಬರುತ್ತದೆ ಎಂದು ನನಗೆ ಗೊತ್ತಿಲ್ಲ.

13. 2022 ರಲ್ಲಿ ವಾದಿ ಎಲ್ಲಿ ಇದ್ದರು ಎಂದರೆ ಸಾಕ್ಷಿ ವಾದಿ 2022 ರಲ್ಲಿ ಹೊರ ದೇಶಕ್ಕೆ ಹೋಗಿ ದಾವಣಗೆರೆ ಬರುತ್ತಿದ್ದರು ಎಂದು ನುಡಿಯುತ್ತಾರೆ. ವಾದ ಪತ್ರದ ಶಿರೋನಾಮೆಯಲ್ಲಿ ವಾದಿಯ ವಿಳಾಸ ಚಿಕ್ಕಮಗಳೂರಿನಲ್ಲಿ ವಾಸವಿದ್ದೇನೆ ಎಂದು ಕಾಣಿಸಲಾಗಿದೆ, ಹೊರ ದೇಶಕ್ಕೆ ಹೋಗಿ ಬರುತ್ತಿಲ್ಲ ಎಂದು ಕಾಣಿಸಿಲ್ಲ ಎಂದರೆ ಸರಿ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು )

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 13.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಪಾಟೀ ಸವಾಲು ಶ್ರೀ ಎಸ್.ಡಿ ವಕೀಲರಿಂದ ಪ್ರತಿವಾದಿಯರ ಪರವಾಗಿ

14. ನಿ.ಪಿ.11 ಅನ್ನು ನಾವು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ.13 ದಾಖಲೆಯನ್ನು ಮಾಡುವ ಉದ್ದೇಶದಿಂದ ನಿ.ಪಿ.11 ಅನ್ನು ಸೃಷ್ಟಿಸಿದ್ದೇವೆ ಎಂದರೆ ಸರಿಯಲ್ಲ. ನಿ.ಪಿ.12 ಕರಾರು ಪತ್ರದಲ್ಲಿ ನಿ.ಪಿ.11 ಜಿ.ಪಿ.ಎ ಮಾಡಿಕೊಂಡಿದ್ದೇವೆ ಎಂದು ಹೇಳಿಲ್ಲ. ನಿ.ಪಿ.12 ರಲ್ಲಿ ನಿ.ಪಿ.11 ಜಿ.ಪಿ.ಎ ದ ಬಗ್ಗೆ ಹೇಳಲು ತೊಂದರೆ ಇರಲಿಲ್ಲ. ದಾವ ಸ್ವತ್ತಿನ ಸ್ವಾಧೀನದಲ್ಲಿ ಪ್ರತಿವಾದಿಗಳೇ ಇದ್ದಾರೆ, ನಮಗೆ ಸ್ವಾಧೀನವನ್ನು ಯಾವತ್ತೂ ಬಿಟ್ಟುಕೊಟ್ಟಿಲ್ಲ. 2010 ರಲ್ಲಿ ನಮಗೆ ಕ್ರಯ ಪತ್ರ ಆಗಿರುತ್ತದೆ. 2010 ರಲ್ಲಿ ಕ್ರಯ ಪತ್ರ ಆದ ಬಳಿಕ ಸ್ವಾಧೀನವನ್ನು ಬಿಟ್ಟು ಕೊಡುವಂತೆ ಪ್ರತಿವಾದಿಗಳಿಗೆ ಕೇಳಿದ್ದೆವು. 3 ತಿಂಗಳ ಬಳಿಕ ಸ್ವಾಧೀನವನ್ನು ಬಿಟ್ಟುಕೊಡುತ್ತೇವೆ ಎಂದು ಪ್ರತಿವಾದಿಗಳು ತಿಳಿಸಿದ್ದರು. 3 ತಿಂಗಳ ಬಳಿಕ ಸ್ವಾಧೀನವನ್ನು ಬಿಟ್ಟುಕೊಡುತ್ತೇವೆ ಎಂದು ಪ್ರತಿವಾದಿಯರು ತಿಳಿಸಿದ ವಿಚಾರವನ್ನು 2010 ಅಲ್ಲಿ ಆದ ಕ್ರಯ ಪತ್ರದಲ್ಲಿ ಹೇಳಿದ್ದೇವೆ.

15. 2010 ರಲ್ಲಿ ಕ್ರಯ ಪತ್ರ ಆದಾಗ ಎಂ.ಎ. ನೂರ್ ಅಹಮದ್ ರವರು ಬದುಕಿದ್ದರು. ದಿಃ 25.06.2010 ರಂದು ಆ ಕ್ರಯ ಪತ್ರ ಆಗಿತ್ತು. ನೂರ್ ಅಹಮದ್ ರವರ ಪರವಾಗಿ ಕ್ರಯದ ಮೊಬಲಗನ್ನು ಜಿ.ಪಿ.ಎ ದಾರರಾದ ಆರೀಫ್ ಅಹಮದ್ ರವರು ಪಡೆದುಕೊಂಡಿದ್ದರು. ಆರೀಫ್ ಅಹಮದ್ ರವರು 6 ಲಕ್ಷ ಒಂದು ಬಾರಿ, 2 ಲಕ್ಷ ಒಂದು ಬಾರಿ ನಗದಾಗಿ ನನ್ನಿಂದ ಪಡೆದಿದ್ದರು. ಸಾಕ್ಷಿ ಸ್ವತಃ ಆರೀಫ್ ಅಹಮದ್ ರವರು ಒಟ್ಟು ರೂ.15,50,000-00 ಹಣವನ್ನು ನಮ್ಮಿಂದ ಪಡೆದಿದ್ದರು ಎಂದು ನುಡಿಯುತ್ತಾರೆ. ನೂರ್ ಅಹಮದ್ ಮತ್ತು ನೂರ್ ಮೊಹಮದ್ ಬೇರೆ

ಬೇರೆ ಎಂದರೆ ಸಾಕ್ಷಿ ಒಬ್ಬರೇ ಎಂದು ನುಡಿಯುತ್ತಾರೆ. ದಿಃ 25.06.2010 ರಂದು ಆದ ಕ್ರಯ ಪತ್ರದಲ್ಲಿ ನೂರ್ ಮೊಹಮದ್ ಮತ್ತು ನೂರ್ ಅಹಮದ್ ಎಂಬ ಎರಡು ಹೆಸರುಗಳನ್ನು ಕಾಣಿಸಿಲ್ಲ. ಸದರಿ ಕ್ರಯ ಪತ್ರದಲ್ಲಿ ರೂ.15,50,000-00 ಕ್ರಯ ಆಗಿದೆ ಎಂದು ಬರೆದಿದ್ದರಾ ಎಂದರೆ ಸಾಕ್ಷಿ ರೂ.16,00,000-00 ಎಂದು ಬರೆದಿದ್ದಾರೆ ಎಂದು ನುಡಿಯುತ್ತಾರೆ. ಜಿ.ಪಿ.ಎ ಯನ್ನು ಬರೆದುಕೊಟ್ಟವರು ನೂರ್ ಅಹಮದ್ ಎಂದು ಸಹಿ ಮಾಡುತ್ತಿದ್ದರೋ ಅಥವಾ ನೂರ್ ಮೊಹಮದ್ ಎಂದು ಸಹಿ ಮಾಡುತ್ತಿದ್ದರೋ ಎಂದರೆ ಸಾಕ್ಷಿ ನೂರ್ ಮೊಹಮದ್ ಎಂದು ಸಹಿ ಮಾಡುತ್ತಿದ್ದರು ಎಂದು ನುಡಿಯುತ್ತಾರೆ. ಕ್ರಯ ಪತ್ರ ಜಂಟಿಯಾಗಿ ಖರೀದಿಸಿದ್ದರಿಂದ ಆರೀಫ್ ಅಹಮದ್ ರವರ ಬಳಿ ಇತ್ತು. ಆರೀಫ್ ಅಹಮದ್ ರವರ ಬಳಿ ಇದ್ದ ಕ್ರಯ ಪತ್ರವನ್ನು ಪಡೆದು ಪರಿಶೀಲಿಸಲು ನಿಮಗೆ ತೊಂದರೆ ಇತ್ತಾ ಎಂದರೆ ಸಾಕ್ಷಿ ಅವಶ್ಯಕತೆ ಇಲ್ಲದ ಕಾರಣ ಪಡೆದುಕೊಳ್ಳಲಿಲ್ಲ ಎಂದು ನುಡಿಯುತ್ತಾರೆ.

16. ದಾವೆಯನ್ನು ದಾಖಲಿಸುವಾಗ ಕ್ರಯ ಪತ್ರವನ್ನು ನಾನು ನೋಡಿದ್ದೇನೆ. ಕ್ರಯ ಪತ್ರದಲ್ಲಿ ದಾವ ಸ್ವತ್ತು ಎಲ್ಲಿ ಇದೆ ಎಂದು ಬರೆದಿದೆ ಎಂದು ನೀವು ನೋಡಿದ್ದೀರಾ ಎಂದರೆ ಸಾಕ್ಷಿ ಕೆ.ಎಂ. ರಸ್ತೆ ಮತ್ತು ಪಟ್ಟಣ ಪಂಚಾಯಿತಿ ರಸ್ತೆ ಒಂದೇ ಆಗಿರುವುದರಿಂದ ನಾನು ಗಮನಿಸಿಲ್ಲ ಎಂದು ನುಡಿಯುತ್ತಾರೆ. ದಾವ ಸ್ವತ್ತು ನನ್ನ ಹೆಸರಿನಲ್ಲಿ ಇಲ್ಲ. ದಾವ ಸ್ವತ್ತನ್ನು ನಾನು ದಿಃ 26.04.2012 ರಲ್ಲಿ ಮಾರಾಟ ಮಾಡಿದ್ದೇನೆ. 2010 ರಂದು ಕ್ರಯ ಪತ್ರ ಆದ ದಿನಾಂಕ 26.04.2012 ರ ಒಳಗೆ ಪ್ರತಿವಾದಿಗಳಿಗೆ ದಾವ ಸ್ವತ್ತುಗಳನ್ನು ಖಾಲಿ ಮಾಡಿಕೊಡುವಂತೆ ನೀವು ಕೇಳಿದ್ದೀರಾ ಎಂದರೆ ಸಾಕ್ಷಿ ಪ್ರತಿವಾದಿಗಳನ್ನು ಮನೆಯ ಬಳಿ ಹೋಗಿ ಕೇಳಿದಾಗ ಪುನಃ ಕಾಲವಕಾಶ ಕೇಳಿದ್ದರು ಎಂದು ನುಡಿಯುತ್ತಾರೆ.

17. ದಿಃ 26.04.2012 ರಂದು ಆದ ಕ್ರಯ ಪತ್ರದಲ್ಲಿ ದಾವ ಸ್ವತ್ತಿನ ಸ್ವಾಧೀನ ಪ್ರತಿವಾದಿಗಳ ಬಳಿ ಇದೆ ಎಂದು ಬರೆಸಿಲ್ಲ. ದಿಃ 26.04.2012

ರಂದು ದಾವ ಸ್ವತ್ತನ್ನು ಎಷ್ಟು ಹಣಕ್ಕೆ ಮಾರಾಟ ಮಾಡಿದ್ದೀರಾ ಎಂದರೆ ಸಾಕ್ಷಿ ಒಟ್ಟು 4 ಲಕ್ಷ ಹಣವನ್ನು ಪಡೆದಿದ್ದೇನೆ, ಕ್ರಯ ಪತ್ರದಲ್ಲಿ ಕ್ರಯದ ಮೌಲ್ಯವನ್ನು ಬರೆದಿಲ್ಲ, ಪಾಲು ವಿಭಾಗದ ಮೂಲಕ ನೀಡಿದ್ದೇನೆ ಮತ್ತು 10 ಲಕ್ಷ ಸಾಲವನ್ನು ಕ್ರಯ ಪಡೆದ ರಫೀಕ್ ಅಹಮದ್ ರವರು ತೀರಿಸಿದ್ದಾರೆ ಎಂದು ನುಡಿಯುತ್ತಾರೆ. ದಿಃ 26.04.2012 ರಂದು ಆದ ಕ್ರಯ ಪತ್ರದಲ್ಲಿ ಪಡೆದ ಹಣವನ್ನು ನಮೂದಿಸುವಂತೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ಸದರಿ ದಾಖಲೆಯಲ್ಲಿ 4 ಲಕ್ಷ ಹಣ ಪಡೆದಿದ್ದನ್ನು ಬರೆಸಿದ್ದಾರೆ ಎಂದು ನುಡಿಯುತ್ತಾರೆ. ಉಳಿದ 10 ಲಕ್ಷ ಹಣವನ್ನು ರಫೀಕ್ ಅಹಮದ್ ರವರಿಗೆ ನೀಡಿದ ಬಗ್ಗೆ ಯಾವ ದಾಖಲೆಯನ್ನು ಬರೆದುಕೊಂಡಿದ್ದೀರಿ ಎಂದರೆ ಸಾಕ್ಷಿ ಅವರು ನಾನು ಮಾಡಿದ 10 ಲಕ್ಷ ಸಾಲವನ್ನು ತೀರಿಸಿದ್ದಾರೆ ಎಂದು ನುಡಿಯುತ್ತಾರೆ. ನಾನು 10 ಲಕ್ಷ ಸಾಲವನ್ನು ದಾವಣಗೆರೆಯಲ್ಲಿ ಹಲವಾರು ಜನರ ಬಳಿ Electric ಕೆಲಸ ಮಾಡುವಾಗ ಪಡೆದಿದ್ದೆ.

18. ನಿ.ಪಿ.15 ಪತ್ರ ಆಗುವ ಕಾಲದಲ್ಲಿ ದಾವ ಸ್ವತ್ತಿನ ಸ್ವಾಧೀನದಲ್ಲಿ ನಾನು ಮತ್ತು ರಫೀಕ್ ಅಹಮದ್ ಇರಲಿಲ್ಲ ಎಂದರೆ ಸರಿ. ನಿ.ಪಿ.15 ಪತ್ರದಲ್ಲಿ ದಾವ ಸ್ವತ್ತಿನ ಸ್ವಾಧೀನದಲ್ಲಿ ನಾವುಗಳು ಇಲ್ಲ, ಪ್ರತಿವಾದಿಗಳು ಇದ್ದಾರೆ ಎಂದು ನಾವು ನಮೂದಿಸಿಲ್ಲ. ನಿ.ಪಿ.15 ಆದ ನಂತರ ದಾವ ಸ್ವತ್ತಿನ ಉಸ್ತುವಾರಿ ಮತ್ತು ಅಧಿಕಾರವನ್ನು ನೀವು ಚಲಾಯಿಸಿದ್ದೀರಾ ಎಂದರೆ ಸಾಕ್ಷಿ ನಾನು ಮತ್ತು ರಫೀಕ್ ಅಹಮದ್ ರವರು ಹೋದಾಗ ಪ್ರತಿವಾದಿಗಳು 3 ತಿಂಗಳ ಕಾಲವಕಾಶವನ್ನು ಕೋರಿದ್ದರು ಎಂದು ನುಡಿಯತ್ತಾರೆ. ನಿ.ಪಿ.15 ಆದ ಬಳಿಕ ಪ್ರತಿವಾದಿಗಳನ್ನು ವಿಚಾರಣೆ ಮಾಡಲು ಹೋಗಲು ರಫೀಕ್ ಅಹಮದ್ ರವರು ನಿಮಗೆ ಅಧಿಕಾರ ಪತ್ರವನ್ನು ನೀಡಿದ್ದರಾ ಎಂದರೆ ಸಾಕ್ಷಿ ವಿಭಾಗ ಪತ್ರ ಆದ ಕಾರಣ ನಾನು ಹೋಗಿದ್ದೆ ಎಂದು ನುಡಿಯುತ್ತಾರೆ. ಪ್ರತಿವಾದಿಗಳು 3 ತಿಂಗಳ ಕಾಲವಕಾಶ ಕೋರಿದ ಬಗ್ಗೆ ಪ್ರತಿವಾದಿಗಳಿಂದ ಕರಾರು ಪತ್ರವನ್ನು ಮಾಡಿಕೊಳ್ಳುವಂತೆ

ನಾನು ಕೇಳಲಿಲ್ಲ. 3 ತಿಂಗಳು ಕಳೆದ ಬಳಿಕ ಈ ಕೇಸಿನ ವಾದಿಯಾಗಲಿ ನಾನಾಗಲಿ ಪ್ರತಿವಾದಿಗಳಿಗೆ ದಾವ ಸ್ವತ್ತಿನ ಸ್ವಾಧೀನ ನೀಡುವಂತೆ ನೋಟೀಸು ನೀಡಿಲ್ಲ.

19. 2012 ರಲ್ಲಿ ನೂರ್ ಅಹಮದ್ ರವರು ಬದುಕಿದ್ದರು. ಸಾಕ್ಷಿ ಸ್ವತಃ ದಿಃ 02.09.2012 ರಂದು ನೂರ್ ಅಹಮದ್ ರವರಿಂದ ಕರಾರು ಪತ್ರ ಬರೆಸಿಕೊಂಡಿದ್ದು, ಆ ನಂತರ ಅವರು ಮೃತಪಟ್ಟಿದ್ದಾರೆ ಎಂದು ನುಡಿಯುತ್ತಾರೆ. ದಿಃ 02.09.2012 ರಂದು ಕರಾರು ಪತ್ರವನ್ನು ಚಿಕ್ಕಮಗಳೂರಿನಲ್ಲಿ ಬರೆಸಿಕೊಂಡಿದ್ದೆವು. 2010 ರಲ್ಲಿ ಕಟ್ಟಡದ ಪೂರ್ಣ ಸ್ವಾಧೀನದಲ್ಲಿ ನೂರ್ ಅಹಮದ್ ರವರೇ ಇದ್ದರು. ಸಾಕ್ಷಿ ಸ್ವತಃ 2010 ರಲ್ಲಿ ಕಟ್ಟಡದ ಮೇಲಿನ ಮಹಡಿಯಲ್ಲಿ ನೂರ್ ಅಹಮದ್ ರವರು ಇದ್ದರು, ಕೆಳ ಮಹಡಿಗಳನ್ನು ಬಾಡಿಗೆಗೆ ನೀಡಿದ್ದರು ಎಂದು ನುಡಿಯುತ್ತಾರೆ.

20. ದಿಃ 02.09.2012 ರಂದು ಆದ ಕರಾರು ಪತ್ರದ ಸ್ಟಾಂಪ್ ಪೇಪರ್ ಅನ್ನು ಚಿಕ್ಕಮಗಳೂರಿನಲ್ಲಿ ಖರೀದಿಸಿದ್ದೆವು, ಸಮಯ ನೆನಪಿಲ್ಲ. ಸಾಕ್ಷಿ ಸ್ವತಃ ನೂರ್ ಅಹಮದ್ ರವರೇ ಆ ಪತ್ರವನ್ನು ಖರೀದಿಸಿದ್ದರು ಎಂದು ನುಡಿಯುತ್ತಾರೆ. ಸದರಿ ಕರಾರು ಪತ್ರದಲ್ಲಿ ಸ್ವತ್ತಿನ ಮಾಲೀಕರು ನಾವುಗಳು 3 ತಿಂಗಳ ಒಳಗೆ ಬಾಡಿಗೆದಾರರಿಂದ ಸ್ವತ್ತಿನ ಸ್ವಾಧೀನವನ್ನು ಬಿಡಿಸಿಕೊಡುತ್ತೇವೆ ಎಂದು ಬರೆಯಲಾಗಿರುತ್ತದೆ. ಸದರಿ ಕರಾರು ಪತ್ರ ರಿಜಿಸ್ಟರ್ ಆಗಿಲ್ಲ, ನೋಟರಿ ಮಾಡಿಸಲಾಗಿತ್ತು. ನೋಟರಿಯನ್ನು ಮಾಡಿದರೆ ನೋಟರಿಯವರ ಸಂಖ್ಯೆಯನ್ನು ನಮೂದಿಸುತ್ತಾರೆ ಎಂದರೆ ಸರಿ. ನೋಟರಿಯನ್ನು ಮಾಡಿದವರ ವಕೀಲರ ಹೆಸರು ನನಗೆ ನೆನಪಿಲ್ಲ. ಆ ಕರಾರು ಪತ್ರವನ್ನು ಮಾಡಿಸುವಾಗ ನಾನು ಹೋಗಿರಲಿಲ್ಲ, ವಾದಿ ರಫೀಕ್ ಅಹಮದರ್ ರವರು ಹೋಗಿದ್ದರು.

21. ನಿ.ಪಿ.18 ರಲ್ಲಿ ನೋಟರಿಯವರ ಸಂಖ್ಯೆ ಇಲ್ಲ ಎಂದರೆ ಸರಿ. ನಿ.ಪಿ.18 ಅನ್ನು ಎಷ್ಟು ಗಂಟೆಗೆ ಮಾಡಲಾಗಿತ್ತು ಎಂದು ವಾದಿ ನನಗೆ

ತಿಳಿಸಲಿಲ್ಲ. ನಿ.ಪಿ.18 ಅನ್ನು ನೋಟರಿ ವಕೀಲರು ಮಾಡಿದ ಬಗ್ಗೆ ತಮ್ಮ ಪುಸ್ತಕದಲ್ಲಿ ನಮೂದಿಸಿರುವ ವಿಚಾರ ನನಗೆ ಗೊತ್ತಿಲ್ಲ. ನಿ.ಪಿ.18 ರಲ್ಲಿ ಬರೆದಿರುವ ಸ್ವಲ್ಪ ವಿಚಾರ ನನಗೆ ಗೊತ್ತು. 2012 ರ ಪತ್ರ ಆದ 3 ತಿಂಗಳ ಬಳಿಕ ವಾದಿ ನನಗೆ ಜಿ.ಪಿ.ಎ ನೀಡಿರಲಿಲ್ಲ.

22. 2010 ರಲ್ಲಿ ನಾನು ಮತ್ತು ಆರೀಫ್ ಅಹಮದ್ ರವರು ಕ್ರಯ ಪತ್ರ ಮಾಡಿಕೊಂಡಾಗ ದಾವ ಸ್ವತ್ತಿನಲ್ಲಿ ಬೇರೆ ಬೇರೆಯವರು ಬಾಡಿಗೆಗೆ ಇದ್ದಾರೆ ಎಂದು ನಮಗೆ ತಿಳಿದಿತ್ತು. 2010 ರಲ್ಲಿ ಕ್ರಯ ಮಾಡಿಕೊಳ್ಳುವಾಗ ದಾವ ಸ್ವತ್ತಿನಲ್ಲಿ ಬಾಡಿಗೆ ಇರುವವರ ಬಗ್ಗೆ ಬಾಡಿಗೆ ಕರಾರು ಪತ್ರಗಳನ್ನು ನಾವು ಪಡೆಯಲಿಲ್ಲ. 2010 ರಲ್ಲಿ ಕ್ರಯ ಮಾಡಿಕೊಳ್ಳುವಾಗ ದಾವ ಸ್ವತ್ತಿನಲ್ಲಿ ಬಾಡಿಗೆ ಇರುವವರಿಂದ ಎಷ್ಟು ಮುಂಗಡ ಹಣ ಪಡೆಯಲಾಗಿದೆ ಎಂಬ ಬಗ್ಗೆ ಮಾಹಿತಿಯನ್ನು ನಾವು ಪಡೆಯಲಿಲ್ಲ. ನಿ.ಪಿ.18 ರಂತೆ ಮಾಡಿಕೊಂಡ ಕರಾರನ್ನು 2010 ರಲ್ಲಿ ನೂರ್ ಅಹಮದ್ ರವರಿಂದ ಮಾಡಿಕೊಳ್ಳಲು ತೊಂದರೆ ಇತ್ತಾ ಎಂದರೆ ಸಾಕ್ಷಿ ಆ ವಿಚಾರಗಳನ್ನು ಆರೀಫ್ ಅಹಮದ್ ರವರೇ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. 2010 ರ ಕ್ರಯ ಪತ್ರದಲ್ಲಿ ನಾನು ಸಹ ಬಾಗಿದಾರ ಎಂದರೆ ಸರಿ.

23. ನಿ.ಪಿ.18 ರ ಕರಾರು ಪತ್ರದಲ್ಲಿ ಕೈ ಬರವಣಿಗೆಯಲ್ಲಿ ಏನಾದರು ಬರೆದಿದೆಯಾ ಎಂದರೆ ಸಾಕ್ಷಿ ದಾಖಲೆಯನ್ನು ನೋಡಿ ಹೇಳಬಲ್ಲೆ ಎಂದು ನುಡಿಯುತ್ತಾರೆ. ನಿ.ಪಿ.18 ರ ಪ್ರತಿ ಪುಟಕ್ಕೆ ನೂರ್ ಅಹಮದ್ ರವರು ಸಹಿ ಮಾಡಿದ್ದಾರೆ, ವಾದಿ ರಫೀಕ್ ಅಹಮದ್ ರವರು ಕೊನೆ ಪುಟಕ್ಕೆ ಸಹಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಿ.ಪಿ.18 ರ ಮೊದಲ ಪುಟದಲ್ಲಿ ಯಾರ ಸಹಿಯು ಕಂಡು ಬರುವುದಿಲ್ಲ ಎಂದರೆ ಸರಿ. 2012 ರಲ್ಲಿ ನೂರ್ ಅಹಮದ್ ರವರಿದ ಬಾಡಿಗೆ ಕರಾರು ಅಥವ ಭೋಗ್ಯ ಪತ್ರವನ್ನು ಮಾಡಿಕೊಳ್ಳಲು ವಾದಿಗೆ ತೊಂದರೆ ಇತ್ತಾ ಎಂದರೆ ಸಾಕ್ಷಿ ನೂರ್ ಅಹಮದ್ ರವರೇ 3 ತಿಂಗಳಲ್ಲಿ ಸ್ವಾಧೀನವನ್ನು ಬಿಡಿಸಿಕೊಡುತ್ತೇವೆ

ಎಂದು ಹೇಳಿದ ಕಾರಣ ಮಾಡಿಕೊಂಡಿಲ್ಲ ಎಂದು ನುಡಿಯುತ್ತಾರೆ.

24. 2010 ರ ಕ್ರಯ ಪತ್ರ ಆದ ಬಳಿಕ ನೂರ್ ಅಹಮದ್ ರವರು ನಮಗೆ ರೂ.2,88,000-00 ಹಣವನ್ನು ದಾವ ಸಲ್ಲಿಸುವ ಸಮಯದಲ್ಲಿ ಕೊಡುವುದು ಬಾಕಿ ಇತ್ತು. ನೂರ್ ಅಹಮದ್ ರವರು ರೂ.2,88,000-00 ಹಣವನ್ನು ಕೊಡುವುದು ಬಾಕಿ ಇದೆ ಎಂದು 2010 ರಲ್ಲಿ ಆದ ನಿ.ಪಿ.13 ಕ್ರಯ ಪತ್ರದಲ್ಲಿ ಕಾಣಿಸಿಲ್ಲ. ನೂರ್ ಅಹಮದ್ ರವರು ರೂ.2,88,000-00 ಹಣವನ್ನು ಕೊಡುವುದು ಬಾಕಿ ಇದೆ ಎಂಬ ಬಗ್ಗೆ ಅವರಿಂದ ಪ್ರತ್ಯೇಕವಾದ ಪತ್ರವನ್ನು ಮಾಡಿಕೊಂಡಿಲ್ಲ. ವಾದ ಪತ್ರದಲ್ಲಿ ನೂರ್ ಅಹಮದ್ ರವರ ಕುಟುಂಬದಿಂದ ರೂ.2,88,000-00 ಹಣ ಕೊಡುವುದು ಬಾಕಿ ಇದೆ ಎಂದು ಹೇಳಿದ್ದೇನೆ.

25. ನೂರ್ ಅಹಮದ್ ರವರು ರೂ.2,88,000-00 ಹಣವನ್ನು ನಿಮ್ಮಿಂದ ಯಾವಾಗ ಪಡೆದಿದ್ದರು ಎಂದರೆ ಸಾಕ್ಷಿ ದಾವ ಸ್ವತ್ತಿನ ಬಾಡಿಗೆಯನ್ನು ಕೊಡುವುದು ಇದೆ ಎಂದು ವಕೀಲರಿಂದ ಆ ಮೊತ್ತವನ್ನು ಲೆಕ್ಕ ಹಾಕಿ ವಾದ ಪತ್ರದಲ್ಲಿ ಕೇಳಿದ್ದೇನೆ ಎಂದು ನುಡಿಯುತ್ತಾರೆ. ನಿ.ಪಿ.18 ರಲ್ಲಿ ರೂ.2,88,000-00 ಹಣ ಬಾಕಿ ಇರುವ ಬಗ್ಗೆ ಬರೆಸಿದ್ದೀರಾ ಎಂದರೆ ಸಾಕ್ಷಿ ತಿಂಗಳಿಗೆ ಇಷ್ಟು ಹಣ ನೀಡಬೇಕು ಎಂದು ಬರೆಸಿದ್ದೇವೆ ಎಂದು ನುಡಿಯುತ್ತಾರೆ.

26. ನೂರ್ ಅಹಮದ್ ರವರ ಕುಟುಂಬಕ್ಕೆ ಯಾವುದೇ ವಿಚಾರ ತಿಳಿಸದೇ ದಾಖಲೆಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸುಳ್ಳು. ಆ ಕಾರಣದಿಂದಲೇ ಜಿ.ಪಿ.ಎ., ಕ್ರಯ ಪತ್ರ, ವಿಭಾಗ ಪತ್ರ, ದಾನ ಪತ್ರ ಮತ್ತು ಕರಾರುಗಳನ್ನು ಸೃಷ್ಟಿಸಿದ್ದೇವೆ ಎಂದರೆ ಸುಳ್ಳು. ವಾದಿ ಮತ್ತು ನಾನು ಸೇರಿ ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶ ಹೊಂದಿದ್ದೇವೆ ಎಂದರೆ ಸರಿಯಲ್ಲ.

27. ಈ ದಾವೆಯನ್ನು ಸಲ್ಲಿಸುವ ಮೊದಲು ಪ್ರತಿವಾದಿಗಳ ಮೇಲೆ ಮೂಡಿಗೆರೆಯ ಕಿರಿಯ ವಿಭಾಗ ನ್ಯಾಯಾಲಯದಲ್ಲಿ ದಾವೆಯನ್ನು

ಸಲ್ಲಿಸಿದ್ದೆವು. ಆ ದಾವೆಯನ್ನು ದಾವ ಸ್ವತ್ತಿನ ಮಾಲೀಕರು ಎಂದು ಘೋಷಣೆ ಕೋರಿ ಸಲ್ಲಿಸಿದ್ದೆವು ಎಂದರೆ ಸರಿ. ಆ ದಾವೆ ಡಿಕ್ರಿಯಾಗಿತ್ತಾ ಎಂದರೆ ಸಾಕ್ಷಿ ಸದರಿ ನ್ಯಾಯಾಲಯದ ವ್ಯಾಪ್ತಿಗೆ ಬರದ ಕಾರಣ ಸದರಿ ಪ್ರಕರಣವನ್ನು ಈ ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ದಾವ ಸ್ವತ್ತಿಗೆ ಸಂಬಂಧಿಸಿದಂತೆ ಬೇರೆ 5 ಜನರ ಮೇಲೆ ದಾವೆಯನ್ನು ಸಲ್ಲಿಸಿದ್ದೆವು. ಇತರೆ 5 ಜನರ ಮೇಲೆ ಸಲ್ಲಿಸಿದ ದಾವೆಯಲ್ಲಿ ಈ ಕೇಸಿನಲ್ಲಿ ಹಾಜರು ಪಡಿಸಿರುವ ದಾಖಲೆಗಳ ವಿಚಾರಗಳನ್ನು ಹೇಳುವ ಅವಶ್ಯಕತೆ ಇಲ್ಲದ ಕಾರಣ ಹೇಳಿಲ್ಲ.

28. O.S.6/2019 ರ ದಾವೆಯಲ್ಲಿ ದಾವ ಸ್ವತ್ತಿನ ಸ್ವಾಧೀನವನ್ನು ಕೇಳಿದ್ದೆವು. O.S.6/2019 ರ ದಾವೆಯಲ್ಲಿ ಆ ಕೇಸಿನ ಪ್ರತಿವಾದಿಗಳು ದಾವ ಸ್ವತ್ತಿನ ಸ್ವಾಧೀನವನ್ನು ಈ ಕೇಸಿನ ಪ್ರತಿವಾದಿಗಳಿಗೆ ಬಿಟ್ಟು ಕೊಟ್ಟಿದ್ದೇವೆ ಎಂದು ಹೇಳಿದ ಕಾರಣ ಆ ದಾವೆಯನ್ನು ಹಿಂದಕ್ಕೆ ಪಡೆದಿದ್ದೆವು. O.S.6/2019 ರ ದಾವೆಯಲ್ಲಿ ನೀವು ಮತ್ತು ಆ ಕೇಸಿನ ಪ್ರತಿವಾದಿಗಳು ಆ ರೀತಿ ಅರ್ಜಿಯನ್ನು ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಆ ಕೇಸಿನ ಪ್ರತಿವಾದಿಗಳೇ ಆ ರೀತಿ ಅರ್ಜಿಯನ್ನು ಸಲ್ಲಿಸಿದ್ದರು ಎಂದು ನುಡಿಯುತ್ತಾರೆ. O.S.6/2019 ರ ದಾಖಲೆಗಳನ್ನು ಈ ಕೇಸಿನಲ್ಲಿ ಹಾಜರು ಪಡಿಸಿರುವುದು ನನಗೆ ನೆನಪಿಲ್ಲ.

29. ಸನಾ ಉಲ್ಲಾ ರವರು ಎಷ್ಟು ಹಣ ಕೊಡಬೇಕು ಎಂದು ನಾನು O.S.6/2019 ರ ದಾವೆಯನ್ನು ಸಲ್ಲಿಸಿದ್ದೆ ಎಂದು ನನಗೆ ನೆನಪಿಲ್ಲ. ಸನಾ ಉಲ್ಲಾ ಮತ್ತು ನನ್ನ ನಡುವೆ ಹಿಂದೆ ಯಾವುದೇ ಕರಾರು ಆಗಿರಲಿಲ್ಲ. ಸನಾ ಉಲ್ಲಾ ರವರಿಗೆ ಎಷ್ಟು ಬಾಡಿಗೆ ಎಂದು ನೀವು ಮಾತನಾಡಿದ್ದೀರಿ ಎಂದರೆ ಸಾಕ್ಷಿ ಸ್ವತ್ತಿನ ಸ್ವಾಧೀನದಲ್ಲಿ ಇರುವ ಈ ಕೇಸಿನ ಪ್ರತಿವಾದಿಗಳ ಜೊತೆ ಅವರ ಜೊತೆ ಬಾಡಿಗೆಯನ್ನು ಮಾತನಾಡಿಕೊಂಡಿದ್ದರು ಎಂದು ನುಡಿಯುತ್ತಾರೆ. O.S.6/2019 ರ ದಾವೆಯಲ್ಲಿ ಸನಾ ಉಲ್ಲಾ ರವರು ಪ್ರತಿ ತಿಂಗಳು 3 ಸಾವಿರ ಬಾಡಿಗೆ

2012 ರಿಂದ 2018 ರವರೆಗೂ ನೀಡಬೇಕು, ಒಟ್ಟು ರೂ.2,88,000-00 ಬಾಡಿಗೆ ಹಣ ನೀಡಬೇಕು ಎಂದು ನಾವು ಕೇಳಿದ್ದು ನನಗೆ ನೆನಪಿಲ್ಲ. 2010 ರಂದು ಕ್ರಯ ಆಗುವಾಗ ಸನಾ ಉಲ್ಲಾ ರವರು ದಾವ ಸ್ವತ್ತಿನ ಕಟ್ಟಡದಲ್ಲಿ ಬಾಡಿಗೆ ಇದ್ದರಾ ಎಂದರೆ ಸಾಕ್ಷಿ ಬಾಡಿಗೆಗೆ ಇದ್ದರು ಎಂದು ನುಡಿದು ನಂತರ ಬಾಡಿಗೆರೆ ಇದ್ದರು ಎಂದು ನಮಗೆ ತಿಳಿಸಿದ್ದರು ಎಂದು ನುಡಿಯುತ್ತಾರೆ. 2010 ರ ಕ್ರಯ ಆದ ಬಳಿಕ ಸನಾ ಉಲ್ಲಾ ರವರಿಗೆ ಬಾಡಿಗೆ ಹಣವನ್ನು ನೀಡಬೇಕು ಎಂದು ನಾನು ಮತ್ತು ಆರೀಫ್ ಅಹಮದ್ ರವರು ಹೋಗಿದ್ದೆವು. ಸಾಕ್ಷಿ ಸ್ವತಃ ದಾವ ಸ್ವತ್ತನ್ನು ನಾವು ಖರೀದಿಸಿದ್ದೇವೆ, ದಾವ ಸ್ವತ್ತನ್ನು ಖಾಲಿ ಮಾಡಿಕೊಡಿ ಎಂದು ಬಾಡಿಗೆದಾರರನ್ನು ಕೇಳಲು ಹೋಗಿದ್ದೆವು ಎಂದು ನುಡಿಯುತ್ತಾರೆ.

30. O.S.6/2019 ರ ದಾವೆಯನ್ನು ದಿಃ 02.11.2022 ರಂದು ನಾವುಗಳೇ ಮೆಮೋ ಸಲ್ಲಿಸಿ ವಜಾ ಮಾಡಿಸಿಕೊಂಡಿದ್ದೆವು ಎಂದರೆ ಸಾಕ್ಷಿ ಆ ಕೇಸಿನ ಪ್ರತಿವಾದಿಗಳೇ ಆ ಮೆಮೋ ಸಲ್ಲಿಸಿದ್ದರು ಎಂದು ನುಡಿಯುತ್ತಾರೆ. (ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು )

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)
ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ

ದಿಃ 10.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಪಾಟೀ ಸವಾಲು ಶ್ರೀ ಎಸ್.ಡಿ ವಕೀಲರಿಂದ ಪ್ರತಿವಾದಿಯರ ಪರವಾಗಿ

31. ಅಫ್ರೋಜ್ ಅಹಮದ್ ಎಂಬುವವರು ನಿಮಗೆ ಗೊತ್ತಾ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ. ಅಫ್ರೋಜ್ ಅಹಮದ್ ರವರ ಮೇಲೆ ಪ್ರಕರಣವನ್ನು ಕಿರಿಯ ನ್ಯಾಯಾಲಯದಲ್ಲಿ ದಾಖಲಿಸಿದ್ದೆ. ಅಫ್ರೋಜ್ ಅಹಮದ್ ರವರು ನನಗೆ ಎಷ್ಟು ಬಾಡಿಗೆ ಮತ್ತು ಎಲ್ಲಿಂದ ಎಲ್ಲಿಯವರೆಗೆ ಕೊಡಬೇಕು ಎಂದು ಆ ಪ್ರಕರಣದಲ್ಲಿ ಕೇಳಿದ್ದೆ ಎಂದು ನನಗೆ ನೆನಪಿಲ್ಲ. ಅಫ್ರೋಜ್ ಅಹಮದ್ ರವರು ಈಗ ಮನೆಯಲ್ಲಿ ಬಾಡಿಗೆಗೆ ಇದ್ದಾರೆ ಎಂದರೆ ಸಾಕ್ಷಿ ಅಫ್ರೋಜ್ ಅಹಮದ್ ರವರು ಮನೆಯನ್ನು 1 ನೇ ಪ್ರತಿವಾದಿಯ ವಶಕ್ಕೆ ನೀಡಿದ್ದಾರೆ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಗೆ ಅಫ್ರೋಜ್ ಅಹಮದ್ ರವರು ಮನೆಯನ್ನು ವಶಕ್ಕೆ ನೀಡಿದ ಕಾರಣ ನಾನು ಆ ದಾವೆಯನ್ನು ವಜಾ ಮಾಡಿಸಿಕೊಂಡಿದ್ದೇನೆ. ಸದರಿ ದಾವೆಯನ್ನು ಯಾವಾಗ ವಜಾ ಮಾಡಿಸಿಕೊಂಡಿದ್ದೆ ಎಂದು ನನಗೆ ನೆನಪಿಲ್ಲ. ಸದರಿ ದಾವೆಯಲ್ಲಿ ನಾನು ಅಫ್ರೋಜ್ ಅಹಮದ್ ರವರಿಗೆ ಮನೆಯನ್ನು ಬಾಡಿಗೆ ನೀಡಿದ್ದೇನೆ ಎಂದು ಹೇಳಿದ ವಿಚಾರ ನನಗೆ ನೆನಪಿಲ್ಲ.

32. ಜೀನತ್ ಉನ್ನಿಸ್ಸಾ, ಸನಾಉಲ್ಲಾ, ಫರೀದಾ ಮತ್ತು ಸುಧಾ ರವರ ಮೇಲೆ ನಾನು ಕಿರಿಯ ಸಿವಿಲ್ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲಿಸಿದ್ದೆ. ಅವರುಗಳು ಎಷ್ಟು ಬಾಡಿಗೆ ಮತ್ತು ಯಾವ ಇಸವಿಯಿಂದ ನನಗೆ ನೀಡಬೇಕು ಎಂದು ಆ ದಾವೆಯಲ್ಲಿ ಕೇಳಿದ್ದೆ ಎಂದು ನನಗೆ ನೆನಪಿಲ್ಲ. ಜೀನತ್ ಉನ್ನಿಸ್ಸಾ, ಸನಾಉಲ್ಲಾ, ಫರೀದಾ, ಸುಧಾ ಮತ್ತು ಅಫ್ರೋಜ್ ಅಹಮದ್ ರವರು ನನಗೆ ಬಾಡಿಗೆ ಹಣವನ್ನು ನೀಡಲಿಲ್ಲ. ಆ ದಾವೆಗಳ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದು ನನಗೆ ನೆನಪಿಲ್ಲ. ಈ ಕೇಸಿನಲ್ಲಿ ಏನೆಲ್ಲಾ ದಾಖಲೆಗಳನ್ನು ಹಾಜರು

ಪಡಿಸಿದ್ದೇನೆ ಎಂದು ನನಗೆ ಗೊತ್ತಿಲ್ಲ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿಯುತ್ತಾರೆ.

33. ದಿಃ 02.09.2012 ರಂದು ಕರಾರು ಪ್ರಕಾರ 4 ಸಾವಿರಕ್ಕೆ ಬಾಡಿಗೆಯನ್ನು ಪ್ರತಿವಾದಿಗೆ ನೀಡಿದ್ದೆ ಎಂದು ವಾದ ಪತ್ರದಲ್ಲಿ ಹೇಳಿದ್ದು ಆ ಬಗ್ಗೆ ದಾಖಲೆಯನ್ನು ಹಾಜರು ಪಡಿಸಿದ್ದೀರಾ ಎಂದರೆ ಸಾಕ್ಷಿ ಅದಕ್ಕೆ ಪ್ರತ್ಯೇಕವಾಗಿ ಕರಾರನ್ನು ಮಾಡಿಕೊಟ್ಟಿಲ್ಲ, ಕರಾರಿನಲ್ಲಿಯೇ ಆ ಬಗ್ಗೆ ಬರೆದಿದ್ದಾರೆ ಎಂದು ನುಡಿಯುತ್ತಾರೆ. 2012 ರಲ್ಲಿ ಜೀನತ್ ಉನ್ನಿಸ್ಸಾ, ಸನಾಉಲ್ಲಾ, ಫರೀದಾ, ಸುಧಾ ಮತ್ತು ಅಫ್ರೋಜ್ ಅಹಮದ್ ರವರು ಆ ಮನೆಯಲ್ಲಿ ಇದ್ದ ಬಗ್ಗೆ ನನಗೆ ನೆನಪಿಲ್ಲ. ಸದರಿ ಕಟ್ಟಡದಲ್ಲಿ 5 ಮನೆಗಳು ಮತ್ತು 2 ಮಳಿಗೆಗಳು ಇರುತ್ತವೆ. ದಿಃ 02.09.2012 ರಂದು 4 ಸಾವಿರ ಬಾಡಿಗೆಗೆ ನನಗೆ ಬರೆದುಕೊಟ್ಟ ಮನೆ 1 ನೇ ಪ್ರತಿವಾದಿ ವಾಸವಿದ್ದ ಮೇಲಿನ ಮನೆಯಾಗಿತ್ತು. ದಿಃ 02.09.2012 ರಂದು ಉಳಿದ ಕಟ್ಟಡದ ಮನೆ ಮತ್ತು ಮಳಿಗೆಗಳಲ್ಲಿ ಬೇರೆಯವರು ವಾಸವಿದ್ದ ಬಗ್ಗೆ ನನಗೆ ನೆನಪಿಲ್ಲ. ನಿ.ಪಿ.47 ರಿಂದ 49 ನೋಟೀಸಿನಲ್ಲಿ ಮನೆಯನ್ನು ಖಾಲಿ ಮಾಡಿ ಬಾಡಿಗೆಯನ್ನು ನೀಡಬೇಕು ಎಂದು ತಿಳಿಸಿದ್ದೇನೆ. ಸದರಿ ನೋಟೀಸುಗಳಲ್ಲಿ ಕಾಣಿಸಿರುವ ಕರಾರನ್ನು ನ್ಯಾಯಾಲಯಕ್ಕೆ ಹಾಜರು ಮಾಡಿಲ್ಲ. ಸದರಿ ಕರಾರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ತೊಂದರೆ ಇಲ್ಲ. ಸದರಿ ಕರಾರು ಯಾರ ಬಳಿ ಇದೆ ಎಂದು ನನಗೆ ನೆನಪಿಲ್ಲ.

34. ಈ ದಾವೆಯನ್ನು ಸಲ್ಲಿಸುವ ಮೊದಲು 1 ನೇ ಪ್ರತಿವಾದಿಗೆ ದಾವ ಆಸ್ತಿಯನ್ನು ಬಿಟ್ಟುಕೊಡಿ ಎಂದು ನೋಟೀಸು ನೀಡಿದ್ದೇನೆ. ಸದರಿ ನೋಟೀಸನ್ನು ಯಾವ ಇಸವಿಯಲ್ಲಿ ನೀಡಿದ್ದೆ ಎಂದು ನನಗೆ ನೆನಪಿಲ್ಲ. 2018 ರಲ್ಲಿ ಸದರಿ ನೋಟೀಸನ್ನು 1 ನೇ ಪ್ರತಿವಾದಿಗೆ ನೀಡಿದ್ದೇನೆ. ನಿ.ಪಿ.47 ರಿಂದ 49 ನೋಟೀಸಿನಲ್ಲಿ ಈ ಪ್ರಕರಣದಲ್ಲಿ ಹಾಜರು ಪಡಿಸಿದ ದಾಖಲೆಗಳ ವಿಚಾರಗಳನ್ನು ಹೇಳುವ ಅವಶ್ಯಕತೆ ಇಲ್ಲದ ಕಾರಣ ಹೇಳಿಲ್ಲ. ಜೀನತ್ ಉನ್ನಿಸ್ಸಾ, ಸನಾಉಲ್ಲಾ, ಫರೀದಾ, ಸುಧಾ ಮತ್ತು

ಅಫ್ರೋಜ್ ಅಹಮದ್ ರವರು ಎಷ್ಟು ಬಾಡಿಗೆ ಹಣ ನಿಮಗೆ ಕೊಡುವುದು ಬಾಕಿ ಇದೆ ಎಂದರೆ ಸಾಕ್ಷಿ ಕೇಸು ವಜಾ ಮಾಡಿಸಿಕೊಂಡಿದ್ದರಿಂದ ಬಿಟ್ಟು ಹಾಕಿದ್ದೇನೆ ಎಂದು ನುಡಿಯುತ್ತಾರೆ. ಜೀನತ್ ಉನ್ನಿಸ್ಸಾ, ಸನಾಉಲ್ಲಾ, ಫರೀದಾ, ಸುಧಾ ಮತ್ತು ಅಫ್ರೋಜ್ ಅಹಮದ್ ರವರಿಂದ ನಾನು ಬಾಡಿಗೆ ಕರಾರನ್ನು ಬರೆಸಿಕೊಂಡದ್ದು ನನಗೆ ನೆನಪಿಲ್ಲ. ಸದರಿ ರವರನ್ನು ಕ್ರಯ ಪತ್ರವನ್ನು ಬರೆಸಿಕೊಂಡಾಗ ಕಟ್ಟಡದಲ್ಲಿ ಇದ್ದವರನ್ನು ಎಲ್ಲರನ್ನು ಮಾತನಾಡಿಸಿಕೊಂಡು ಬಂದಿದ್ದೇನೆ. ಜೀನತ್ ಉನ್ನಿಸ್ಸಾ, ಸನಾಉಲ್ಲಾ, ಫರೀದಾ, ಸುಧಾ ಮತ್ತು ಅಫ್ರೋಜ್ ಅಹಮದ್ ರವರನ್ನು ಮಾತನಾಡಿಸಿದಾಗ ನಾನು ಕ್ರಯಕ್ಕೆ ಕೊಂಡಿದ್ದೇನೆ, ನನಗೆ ಬಾಡಿಗೆ ಕರಾರು ಪತ್ರವನ್ನು ಮಾಡಿಸಿಕೊಡಿ ಎಂದು ಕೇಳಿದ್ದು ನನಗೆ ನೆನಪಿಲ್ಲ.

35. ವಾದ ಪತ್ರದಲ್ಲಿ ದಾವ ಆಸ್ತಿಯಲ್ಲಿ 7 ಮನೆಗಳು ಇವೆ ಎಂದು ಹೇಳಿರುವುದು ನನಗೆ ನೆನಪಿಲ್ಲ. 7 ಮನೆಗಳಲ್ಲಿ ಈಗ ಯಾರೆಲ್ಲಾ ವಾಸವಿದ್ದಾರೆ ಎಂದರೆ ಸಾಕ್ಷಿ ನಾನು ಹೋಗಿಲ್ಲ ಎಂದು ನುಡಿಯುತ್ತಾರೆ. ನಾನು ಯಾವತ್ತೂ ದಾವ ಸ್ವತ್ತಿನ ಬಳಿ ಹೋಗದೇ ಇದ್ದರು ಸಹ ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯನ್ನು ಹೇಳಲು ನನಗೆ ಯಾವುದೇ ಹಕ್ಕು ಮತ್ತು ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

36. 1 ನೇ ಪ್ರತಿವಾದಿ 2004 ರಿಂದ 2010 ರವರೆಗೂ ವಾದಿಯ ಹೆಂಡತಿ ನಸ್ರೀನ್ ತಾಜ್ ರವರ ಕತಾರ್ ದೇಶದಲ್ಲಿ ಇರುವ ಬ್ಯೂಟಿ ಪಾರ್ಲರ್ ನಲ್ಲಿ ಕೆಲಸ ಮಾಡಿಕೊಂಡು ಇದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿ ರಫೀಕ್ ಅಹಮದ್ ರವರ ಹೆಂಡತಿಯ ಪರಿಚಯ ನನಗೆ ಇದೆ. ಈ ದಾವೆಯನ್ನು ಸಲ್ಲಿಸಿದ ಬಳಿಕ ಮೊದಲು ಅಥವ ನಂತರ ವಾದಿಯ ಹೆಂಡತಿಯನ್ನು ನಾನು ಈ ಕೇಸಿನ ವಿಚಾರವನ್ನು ಮಾತನಾಡಿಸಲಿಲ್ಲ. 1 ನೇ ಪ್ರತಿವಾದಿಯ ಗಂಡ ದಾವ ಆಸ್ತಿಯ ಮೇಲೆ K.S.F.C ಯಲ್ಲಿ ಸಾಲ ಪಡೆದಿದ್ದರು ಎಂದರೆ ಸರಿ. ಸದರಿ ವಿಚಾರವನ್ನು ಆರೀಫ್ ಅಹಮದ್ ರವರು ನನಗೆ ತಿಳಿಸಿದ್ದರು. ಸದರಿ ವಿಚಾರವನ್ನು ನಾನು ಮತ್ತು ಆರೀಫ್ ರವರು ಜಂಟಿಯಾಗಿ ದಾವ

ಆಸ್ತಿಯನ್ನು ಖರೀದಿಸುವಾಗ ತಿಳಿಸಿದ್ದರು. ವಾದಿಯ ಹೆಂಡತಿಯ ಜೊತೆ 1 ನೇ ಪ್ರತಿವಾದಿಗೆ ಆ ಸಮಯದಲ್ಲಿ ತುಂಬಾ ವಿಶ್ವಾಸ ಇತ್ತು ಎಂದರೆ ನನಗೆ ಗೊತ್ತಿಲ್ಲ. K.S.F.C ರವರು ದಾವ ಆಸ್ತಿಯ ಸಾಲವನ್ನು 1 ನೇ ಪ್ರತಿವಾದಿಯ ಗಂಡ ತೀರಿಸದ ಕಾರಣ ಹರಾಜು ಮಾಡಲು ಸಿದ್ದರಾಗಿದ್ದು ಆ ಸಮಯದಲ್ಲಿ ಸದರಿ ಸಾಲವನ್ನು ವಾದಿಯ ಹೆಂಡತಿ ನಸ್ರೀಮ್ ತಾಜ್ ರವರು ತೀರಿಸುತ್ತೇನೆ ಎಂದು 1 ನೇ ಪ್ರತಿವಾದಿಗೆ ತಿಳಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. K.S.F.C ಯಿಂದ ಪಡೆದ ಸಾಲವನ್ನು ಆರೀಫ್ ಅಹಮದ್ ರವರು ತೀರಿಸಿದ್ದರು ಎಂದು ನನಗೆ ತಿಳಿಸಿದ್ದರು. 2009 ರಲ್ಲಿ ಸಾಲವನ್ನು ತೀರಿಸಿದ್ದ ಬಗ್ಗೆ ಆರೀಫ್ ಅಹಮದ್ ರವರು ನನಗೆ ತಿಳಿಸಿದ್ದರು. ಸದರಿ ಸಾಲವನ್ನು ತೀರಿಸಿದ್ದಾಗ 1 ನೇ ಪ್ರತಿವಾದಿ ಕತಾರ್ ದೇಶದಲ್ಲಿ ವಾಸವಿದ್ದರು ಎಂದರೆ ನನಗೆ ಗೊತ್ತಿಲ್ಲ.

37. ವಾದಿಯ ಹೆಂಡತಿ ನಸ್ರೀಮ್ ತಾಜ್ ರವರು ಸಾಲವನ್ನು ತೀರಿಸುವ ಸಲುವಾಗಿ 1 ನೇ ಪ್ರತಿವಾದಿಯ ಗಂಡನ ಹೆಸರಿನಲ್ಲಿ ಇದ್ದ ದಾಖಲೆಗಳನ್ನು 1 ನೇ ಪ್ರತಿವಾದಿಗೆ ತಿಳಿಸದಂತೆ ತನ್ನ ಹೆಸರಿಗೆ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ವಾದಿಯ ಹೆಂಡತಿ ನಸ್ರೀಮ್ ತಾಜ್ ರವರು ಸಾಲವನ್ನು ತೀರಿಸಿದಾಗ ಸದರಿ ಸಾಲ ತೀರಿಸಿದ ಹಣವನ್ನು 1 ನೇ ಪ್ರತಿವಾದಿ ನಸ್ರೀಮ್ ತಾಜ್ ರವರಿಗೆ ವಾಪಸ್ಸು ನೀಡುತ್ತೇನೆ ಎಂದು ಹೇಳಿದ್ದರು ಎಂದರೆ ಸರಿಯಲ್ಲ. 2010 ರಲ್ಲಿ 1 ನೇ ಪ್ರತಿವಾದಿ ಕತಾರ್ ದೇಶದಿಂದ ಭಾರತಕ್ಕೆ ವಾಪಸ್ಸು ಬಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ವಾದಿಯ ಹೆಂಡತಿ ನಸ್ರೀಮ್ ತಾಜ್ ಕತಾರ್ ದೇಶದಲ್ಲಿಯೇ ವಾಸವಿದ್ದರು ಎಂದರೆ ನನಗೆ ಗೊತ್ತಿಲ್ಲ.

(ಮುಂದುವರೆದ ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು)

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ.ಹೇ.ಕೇ.ಸ.ೀ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರಧಾನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ